**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಹೆಚ್ಚುವರಿ ದೋಷಾರೋಪಣಾ ಪಟ್ಟಿ ಸಾಕ್ಷಿದಾರರು ಪಿಡಬ್ಲು : 17

ಸಾಕ್ಷಿಯ ಹೆಸರು : ಶ್ರೀ.ಚೇತನ ಬಾಳೋಲ

ತಂದೆಯ ಹೆಸರು : ಶ್ರೀ.ಸುಕುಮಾರ ಬಾಳೋಲ

ವಯಸ್ಸು : 37 ವರ್ಷ

ಉದ್ಯೋಗ : ಹಿರಿಯ ವೈಜ್ಞಾನಿಕ ಅಧಿಕಾರಿಗಳು , ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಳಗಾವಿ

ವಾಸ್ತವ್ಯ : ಬೆಳಗಾವಿ

ದಿನಾಂಕ : 18-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಸಾಕ್ಷಿಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಾವು ಕಾರ್ಯನಿರ್ವಹಿಸುತ್ತಿರುವ ಬೆಳಗಾವಿಯ ಕಚೇರಿಯಿಂದ ತಮ್ಮ ಮೊಬೈಲ್ ಆಪ್ ನಿಂದ ನ್ಯಾಯಾಲಯದ ಗೂಗಲ್ ಮೀಟ್ ಆ್ಯಪ್ ಮೂಲಕ ವಿಚಾರಣೆಗೆ ಹಾಜರಾಗಿರುತ್ತಾರೆ. ಕೋ-ಆರ್ಡಿನೇಟರ ಆಗಿ ಪ್ರವೀಣ ಕಾತೂರ, ಟೆಕ್ನಿಶಿಯನ್ ಹಾಜರಾಗಿರುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಸಾಕ್ಷಿಯಿಂದ ಖಾತರಿಪಡಿಸಿಕೊಂಡು ನ್ಯಾಯಾಲಯದ ಪ್ರಥಮ ದರ್ಜೆ ಸಹಾಯಕರಾದ ಶ್ರೀ.ಎಸ್.ಎಲ್.ದೇವರಮನಿ ರವರನ್ನು ಕೋಆರ್ಡಿನೇಟರ ಆಗಿ ನೇಮಿಸಿಕೊಂಡು ಆರೋಪಿ ಪರ ವಕೀಲರು ಹಾಗೂ ಸರ್ಕಾರಿ ವಕೀಲರ ಉಪಸ್ಥಿತಿಯಲ್ಲಿ ತೆರೆದ ನ್ಯಾಯಾಲಯದಲ್ಲಿ ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು. ಸಾಕ್ಷಿಯು ತಮ್ಮ ಹತ್ತಿರ ಈ ಪ್ರಕರಣದ ಕಡತವು ಇರುವುದಾಗಿ ನುಡಿಯುತ್ತಾರೆ.)

(3 ನೇ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮಾರ್ಚ್ 2014 ರಿಂದ ಈ ದಿನದವರೆಗೆ ನಾನು ಬೆಳಗಾವಿ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಹಿರಿಯ ವೈಜ್ಞಾನಿಕ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕಃ 06-05-2019 ರಂದು ಬಸವೇಶ್ವರ ಚೌಕ ಪೋಲಿಸ ಠಾಣೆಯ ಶ್ರೀ.ಗುರುಪಾದ ಜಾರೆ ಎನ್ನುವವರು ನಮ್ಮ ಕಚೇರಿಗೆ ಹಾಜರಾಗಿ ನಿಪ್ಪಾಣಿ ಬಸವೇಶ್ವರ ಚೌಕ ಪೋಲಿಸ ಠಾಣೆ ಅಪರಾಧ ಸಂಖ್ಯೆ 15/2019 ರಲ್ಲಿ ಜಪ್ತಾದ ಐದು ವಸ್ತುಗಳನ್ನು ವೈಜ್ಞಾನಿಕ ಪರೀಕ್ಷೆಗಾಗಿ ನಮ್ಮ ಕಚೇರಿಯ ಸ್ವೀಕೃತಿ ವಿಭಾಗದಲ್ಲಿ ಹಾಜರು ಮಾಡಿದ್ದರು.

3. ಸ್ವೀಕೃತಿ ವಿಭಾಗದವರು ಆ ವಸ್ತುಗಳನ್ನು ಸ್ವೀಕರಿಸಿಕೊಂಡು RFSL/TS /553/2019 ನ್ನು ನೊಂದಣಿ ಮಾಡಿ ನಂಬರ ನೀಡಿರುತ್ತಾರೆ. ನಾನು ಆ ವಸ್ತುಗಳನ್ನು ಪರೀಕ್ಷೆಗಾಗಿ ಸ್ವೀಕರಿಸಿಕೊಂಡು ಪರಿಶೀಲಿಸಿದಾಗ ವಸ್ತುಗಳ ಮೇಲೆ ಇದ್ದ ಸೀಲು ಮಾದರಿ ಸೀಲಗೆ ಅನುಗುಣವಾಗಿತ್ತು ಮತ್ತು ಹೊಂದಾಣಿಕೆ ಆಗುತ್ತಿತ್ತು. ನಾನು ಪರೀಕ್ಷೆಗಾಗಿ ಸ್ವೀಕರಿಸಿದ ಸೀಲು ಮಾಡಲಾದ 5 ಭಾಂಗಿಗಳು ಸುಸ್ಥಿತಿಯಲ್ಲಿದ್ದವು.

4. ನಾನು ಆ ಭಾಂಗಿಗಳನ್ನು ತೆರೆದು ನೋಡಲಾಗಿ

1. ಪ್ಲಾಸ್ಟಿಕ ಡಬ್ಬದಲ್ಲಿ ಹೊಟ್ಟೆ ಮತ್ತು ಹೊಟ್ಟೆಯಲ್ಲಿನ ಅಂಶಗಳು
2. ಶ್ವಾಸಕೋಶದ ಭಾಗಗಳು.
3. ಲಿವರ ಮತ್ತು ಮೂತ್ರಪಿಂಡದ ಭಾಗಗಳು.
4. EDTA ಟ್ಯೂಬನಲ್ಲಿದ್ದ ರಕ್ತ.
5. ವಸ್ತು ಸಂಖ್ಯೆ 1 ರಿಂದ 4 ನ್ನು ಸಂರಕ್ಷಿಸಲು ಉಪಯೋಗಿಸಿದ ಉಪ್ಪಿನ ದ್ರವಣ.

5. ವಸ್ತು ಸಂಖ್ಯೆ 1 ರಿಂದ 4 ವಸ್ತುಗಳು 39 ವರ್ಷ ವಯಸ್ಸಿನ ಗಂಡು ವ್ಯಕ್ತಿ ಅರವಿಂದ ಗೌರಿ ಶಂಕರ ಪೋಳ ಅವರ ಮರಣೋತ್ತರ ಪರೀಕ್ಷೆ ಸಮಯದಲ್ಲಿ ವೈದ್ಯರು ಸಂಗ್ರಹಿಸಿದ ವಿಸ್ರಾಗಳು ಆಗಿರುತ್ತವೆ.

6. ವಸ್ತು ಸಂಖ್ಯೆ 1 ರಿಂದ 4 ವಸ್ತುಗಳನ್ನು ವೈಜ್ಞಾನಿಕವಾಗಿ ಪರೀಕ್ಷೆಗೆ ಒಳಪಡಿಸಿದಾಗ ಆ 4 ವಸ್ತುಗಳಲ್ಲಿ ಮದ್ಯಸಾರದ ಅಂಶ ಕಂಡುಬಂದಿತ್ತು. ಬೇರೆ ಯಾವುದೇ ರೀತಿಯ ವಿಷಕಾರಕ ಅಂಶಗಳು ಕಂಡುಬಂದಿರಲಿಲ್ಲ. ಮದ್ಯಸಾರವು 100ml ರಕ್ತದಲ್ಲಿ 150.4 mg ಇತ್ತು. ವಸ್ತು ಸಂಖ್ಯೆ 1 ರಿಂದ 4 ನ್ನು ಪರೀಕ್ಷೆ ಮಾಡಿದ ಬಗ್ಗೆ ನಾನು ವರದಿಯನ್ನು ನೀಡಿದ್ದೇನೆ. ವರದಿಯನ್ನು ನಿಪಿ–57 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–57 [ಎ] ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 3 ನೇ ಆರೋಪಿ ಪರವಾಗಿ ಶ್ರೀ.ಬಿ .ಜೆ .ಜಿ . ವಕೀಲರಿಂದ, 1 ನೇ ಆರೋಪಿ ಪರ ಶ್ರೀ.ಬಿ.ಎಸ್.ಆರ್ ವಕೀಲರಿಂದ ಮತ್ತು 2 ನೇ ಆರೋಪಿ ಪರ ಶ್ರೀ.ಎಲ್.ಜಿ.ಎನ್ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.